

بِسْمِ اللهِ الرَّحْمَنِ الرَّحِيم

# ನಮಾಝ್‌ಗಳನ್ನು ವಿಧಿವತ್ತಾಗಿ ನಿರ್ವಹಿಸಿರಿ. ಆರಾಧನೆ ಅಲ್ಲಾಹನಿಗೆ ಮಾತ್ರ ಸೀಮಿತವಾಗಿರಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **‘ಬೈತುಲ್ ಫುತೂಹ್’** ಮಸೀದಿಯಲ್ಲಿ 15–04–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಪವಿತ್ರ ಖುರ್‌ಆನ್‌ನಲ್ಲಿ ನಮಾಝನ್ನು ಅನುಷ್ಠಿಸುವ ಬಗ್ಗೆ ಅನೇಕ ಸ್ಥಳಗಳಲ್ಲಿ ನಮ್ಮ ಗಮನವನ್ನು ಸೆಳೆಯಲಾಗಿದೆ. ಕೆಲವು ಸ್ಥಳಗಳಲ್ಲಿ ನಮಾಝನ್ನು ಸಂರಕ್ಷಿಸಬೇಕೆಂದು ಆಜ್ಞೆ ನೀಡಲಾಗಿದೆ. ಕೆಲವು ಸ್ಥಳಗಳಲ್ಲಿ ನಮಾಝನ್ನು ಕ್ರಮಬದ್ಧವಾಗಿ ಅನುಷ್ಠಿಸುವ ಆಜ್ಞೆಗಳಿವೆ. ಕೆಲವು ಸ್ಥಳಗಳಲ್ಲಿ ನಮಾಝನ್ನು ಅದಕ್ಕೆ ನಿಗದಿ ಪಡಿಸಿದ ಸಮಯದಲ್ಲಿ ಅನುಷ್ಠಿಸುವ ಬಗ್ಗೆ ಆಜ್ಞೆ ನೀಡಲಾಗಿದ್ದು, ನಮಾಝ್ ಅನುಷ್ಠಿಸುವ ಸಮಯವನ್ನೂ ಸಹ ವಿವರಿಸಲಾಗಿದೆ. ನಮಾಝನ್ನು ಇಂತಿಂತಹ ಸಮಯಗಳಲ್ಲಿ ಅನುಷ್ಠಿಸಬೇಕು, ಸತ್ಯವಿಶ್ವಾಸಿ ಈ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಬೇಕು, ಅವುಗಳಿಗೆ ಬದ್ಧನಾಗಬೇಕು ಎಂದೆಲ್ಲಾ ಆಜ್ಞಾಪಿಸಲಾಗಿದೆ. ಒಟ್ಟಾರೆ ಹೇಳುವುದಾದರೆ ನಮಾಝ್ ಅನುಷ್ಠಿಸುವ ಬಗ್ಗೆ ಮತ್ತು ಅದರ ಅನುಗ್ರಹದ ಬಗ್ಗೆ ಪದೇ ಪದೇ ಅಲ್ಲಾಹನು ಸತ್ಯವಿಶ್ವಾಸಿಗೆ ಉಪದೇಶಿಸಿದ್ದಾನೆ. ಅದಲ್ಲದೆ ಮನುಷ್ಯನ ಸೃಷ್ಟಿಯ ಉದ್ದೇಶ ಲಕ್ಷ್ಯವೇ ಆರಾಧನೆ ಎಂದು ಅಲ್ಲಾಹನು ಹೇಳಿದ್ದಾನೆ. **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.** ಜಿನ್ನ್ ಮತ್ತು ಇನ್ಸ್‌ಗಳ ಸೃಷ್ಟಿಯ ಉದ್ದೇಶವೇ ನನ್ನನ್ನು ಆರಾಧಿಸುವುದಾಗಿದೆ ಎಂದು ಅಲ್ಲಾಹನು ಹೇಳಿದ್ದಾನೆ.

ಆದರೆ ಮನುಷ್ಯನು ತನ್ನ ಸೃಷ್ಟಿಯ ಉದ್ದೇಶವನ್ನು ಗುರುತಿಸುವುದಿಲ್ಲ ಮತ್ತು ಅದರಿಂದ ದೂರವಿರುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದರ ಮೂಲ ಉದ್ದೇಶ ನೀವು ಅಲ್ಲಾಹನನ್ನು ಆರಾಧಿಸಬೇಕು ಎಂದಾಗಿದೆ. ಆದರೆ ಯಾವ ಜನರು ಈ ಮೂಲ ಉದ್ದೇಶವನ್ನು ಬಿಟ್ಟು ಮೃಗಗಳ ಹಾಗೆ ತಿನ್ನುವುದು ಕುಡಿಯುವುದು ಮತ್ತು ನಿದ್ರಿಸುವುದು ಮಾತ್ರ ತಮ್ಮ ಜೀವಿತದ ಉದ್ದೇಶವೆಂದು ಗ್ರಹಿಸುತ್ತಾರೋ ಅವರು ಅಲ್ಲಾಹನ ಅನುಗ್ರಹದಿಂದ ದೂರಸರಿದು ಹೋಗಿರುತ್ತಾರೆ. ಅವರ ಬಗ್ಗೆ ಅಲ್ಲಾಹನಿಗೆ ಯಾವ ಹೊಣೆಗಾರಿಕೆಯೂ ಇರುವುದಿಲ್ಲ.

ಯಾರು ತಾವು ಸತ್ಯವಿಶ್ವಾಸಿಗಳೆಂದು ವಾದಿಸುತ್ತಾರೋ ಅವರು ತಮ್ಮ ಎಲ್ಲ ಶಕ್ತ ಸಾಮರ್ಥ್ಯಗಳ ಮೂಲಕ ಈ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ಲಕ್ಷ್ಯಗೊಟ್ಟು ಪ್ರಯತ್ನಿಸಬೇಕು. ಮತ್ತು ಆ ಮೂಲಕ ಅಲ್ಲಾಹನ ಅನುಗ್ರಹಗಳ ವಾರೀಸುದಾರರಾಗಬೇಕು. ಅವರು ಅಲ್ಲಾಹನ ಅನುಗ್ರಹಗಳನ್ನು ಗಳಿಸುತ್ತಾ ಇರಬೇಕು.

ಆರಾಧನೆಯ ಬಾಧ್ಯತೆಯನ್ನು ನಿರ್ವಹಿಸುವುದು ಹೇಗೆ? ಇದರ ಬಗ್ಗೆ ಇಸ್ಲಾಮ್ ಐದು ಹೊತ್ತಿನ ನಮಾಝ್ ಅನುಷ್ಠಿಸುವ ಆಜ್ಞೆ ನೀಡಿದೆ. ನಮಾಝ್ ಆರಾಧನೆಯ ತಿರುಳು ಎಂದು ಹದೀಸಿನಲ್ಲಿ ಹೇಳಲಾಗಿದೆ. ಆದುದರಿಂದ ಈ ತಿರುಳನ್ನು ಗಳಿಸುವ ಮೂಲಕ ಮಾತ್ರವೇ ನಾವು ಆರಾಧನೆಯ ಉದ್ದೇಶವನ್ನು ಈಡೇರಿಸಬಲ್ಲೆವು. ಈ ವಿಷಯದ ಬಗ್ಗೆ ಬಹಳಷ್ಟು ಗಮನ ಹರಿಸಬೇಕಾದ ಅಗತ್ಯವಿದೆ. ಒಂದು ಪ್ರದೇಶದಲ್ಲಿ ವಾಸಿಸುವವರು ತಮ್ಮ ಸ್ಥಳೀಯ ನಮಾಝ್ ಕೇಂದ್ರಗಳಲ್ಲಿ ನಮಾಝ್ ಅನುಷ್ಠಿಸಲು ಕ್ರಮಬದ್ಧವಾಗಿ ಹೋಗಬೇಕು. ವಿಶಿಷ್ಟವಾಗಿ ಸುಬ್‌ಹ್ ನಮಾಝ್ ಅನುಷ್ಠಿಸಲು ಹೋಗಬೇಕು. ಇಲ್ಲಿ ಮಾತ್ರವಲ್ಲ ಲೋಕದ ಪ್ರತಿಯೊಂದು ದೇಶದಲ್ಲಿ ಇದರ ಬಗ್ಗೆ ಪ್ರಯತ್ನ ಮಾಡಬೇಕು. ಮಸ್‌ಜಿದ್‌ಗಳನ್ನು ಜನನಿಬಿಡವನ್ನಾಗಿ ಮಾಡಬೇಕು. ವಿಶಿಷ್ಟವಾಗಿ ಜಮಾಅತಿನ ಹುದ್ದೇದಾರರು, ಜಮಾಅತಿನ ಕಾರ್ಯಕರ್ತರು ಹಾಗೂ ಜೀವಿತವನ್ನು ವಕ್ಫ್ ಮಾಡಿದವರು ಇದರ ಬಗ್ಗೆ ಗಮನ ಹರಿಸಿದರೆ ನಮಾಝ್‌ಗೆ ಹಾಜರಾಗುವವರ ಸಂಖ್ಯೆ ಬಹಳಷ್ಟು ವರ್ಧಿಸುವುದು. ನಮಾಝ್‌ಗಳನ್ನು ಕ್ರಮಬದ್ಧವಾಗಿ ಮತ್ತು ನಿಷ್ಠೆಯಿಂದ ಅನುಷ್ಠಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಮಾಝ್‌ಗಳನ್ನು ಕ್ರಮಬದ್ಧವಾಗಿ ತಪ್ಪದೆ ಅನುಷ್ಠಿಸಿರಿ. ಕೆಲವರು ಕೇವಲ ಒಂದು ನಮಾಝ್ ಮಾತ್ರ ಅನುಷ್ಠಿಸುತ್ತಾರೆ. ಅವರು ನೆನಪಿಡಬೇಕಾದುದೇನೆಂದರೆ ನಮಾಝಿಗೆ ಯಾವುದೇ ಮಾಫಿ ಇರುವುದಿಲ್ಲ. ಪ್ರವಾದಿಗಳಿಗೂ ಸಹ ಅಂತಹ ವಿನಾಯತಿ ಇರುವುದಿಲ್ಲ. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಂದು ಹೊಸ ಗುಂಪು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ತಮಗೆ ನಮಾಝ್ ಅನುಷ್ಠಿಸುವುದರಿಂದ ವಿನಾಯತಿ ನೀಡಬೇಕೆಂದು ಅಪೇಕ್ಷಿಸಿತು. ನಮಗೆ ಕೆಲಸ ಬಹಳ ಇದೆ. ನಮಗೆ ನಮಾಝ್ ಮಾಡದಿರಲು ಅನುಮತಿ ನೀಡಬೇಕು ಎಂದು ಆ ಗುಂಪಿನ ಜನರು ಅಪೇಕ್ಷಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾವ ಧರ್ಮದಲ್ಲಿ ಕರ್ಮಗಳ ಅನುಷ್ಠಾನ ಇಲ್ಲವೋ ಆ ಧರ್ಮದಿಂದ ಯಾವ ಪ್ರಯೋಜನವೂ ಇಲ್ಲ ಎಂದು ಹೇಳಿದರು. ಆದುದರಿಂದ ನೀವು ಈ ಮಾತನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತನ್ನಿರಿ.

ಎಲ್ಲದಕ್ಕಿಂತ ಮುಖ್ಯವಾದುದು ಅಲ್ಲಾಹನ ಅನುಗ್ರಹವಾಗಿದೆ. ಆರೋಗ್ಯವಿದ್ದರೆ ಎಲ್ಲವೂ ಇದೆ ಎಂದು ಭಾವಿಸುವುದು ತಪ್ಪು. ಇಂತಿಂತಹ ಕೆಲಸ ಮಾಡುವುದರಿಂದ ಆರೋಗ್ಯವನ್ನು ಕಾಪಾಡಬಹುದು ಎಂದು ಭಾವಿಸುವುದು ಸಹ ತಪ್ಪಾಗಿದೆ. ರೋಗಪೀಡಿತರಾದಾಗ ಇಂತಿಂತಹ ಔಷಧಗಳ ಸೇವನೆಯಿಂದ ಗುಣಮುಖವಾಗಬಹುದು ಎಂಬ ಯೋಚನೆ ಸಹ ಸರಿಯಲ್ಲ. ಇವೆಲ್ಲ ಅಲ್ಲಾಹನ ಆಜ್ಞೆ ಪ್ರಕಾರ ನಡೆಯುತ್ತಾ ಇರುತ್ತವೆ. ಅಲ್ಲಾಹನ ಆಜ್ಞೆ ಇಲ್ಲದಿದ್ದರೆ ಎಲ್ಲವೂ ನಿರರ್ಥಕವಾಗುವುವು. ಯಾರ ಆಜ್ಞೆ ಪ್ರಕಾರ ಎಲ್ಲ ವಸ್ತುಗಳು ಚಲಾಯಿಸಲ್ಪಡುತ್ತಿವೆಯೋ ಆ ಅಲ್ಲಾಹನ ಮುಂದೆ ನಾವು ಬಾಗುವುದು ಆವಶ್ಯಕವಾಗಿದೆ. ಅವನನ್ನು ಆರಾಧಿಸುವುದು ಆವಶ್ಯಕವಾಗಿದೆ. ಅವನೊಂದಿಗೆ ಸಂಬಂಧ ಸ್ಥಾಪಿಸುವುದು ಆವಶ್ಯಕವಾಗಿದೆ. ನಮಾಝ್‌ಗಳ ಅನುಷ್ಠಾನ ನಮ್ಮ ಸೃಷ್ಟಿಯ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಆವಶ್ಯಕವಾಗಿದೆ ಮಾತ್ರವಲ್ಲ ಅದು ನಮ್ಮನ್ನು ವಿಪತ್ತುಗಳಿಂದಲೂ ಕಷ್ಟಗಳಿಂದಲೂ ರಕ್ಷಿಸುತ್ತದೆ. ಏಕೆಂದರೆ ಅನೇಕ ಕೆಲಸಗಳು ಹೇಗಿರುತ್ತವೆ ಎಂದರೆ ಬಾಹ್ಯವಾಗಿ ನೋಡಿದರೆ ಅವು ಅಸಾಧ್ಯವೆಂದು ತೋರುತ್ತವೆ. ಆದರೆ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದರ ಮೂಲಕ ಅವು ಸುಲಭ ಸಾಧ್ಯವಾಗುತ್ತವೆ. ಆದುದರಿಂದ ತಿಳಿಯಬೇಕಾದುದೇನೆಂದರೆ ಏನೆಲ್ಲ ಆಗುತ್ತವೆಯೋ ಅವು ಅಲ್ಲಾಹನ

ಆಜ್ಞೆ ಪ್ರಕಾರ ಸಂಭವಿಸುತ್ತವೆ. ಆದುದರಿಂದ ಅಲ್ಲಾಹನ ಅನುಗ್ರಹಗಳನ್ನು ಸ್ವಾಯತ್ತ ಮಾಡಿಕೊಳ್ಳಲು ಹೆಚ್ಚು ಹೆಚ್ಚು ಪ್ರಯತ್ನ ಮಾಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಚೆನ್ನಾಗಿ ನೆನಪಿಟ್ಟು ಕೊಳ್ಳಿರಿ. ಅಲ್ಲಾಹನನ್ನು ಬಿಟ್ಟು ಔಷಧಿ ಮತ್ತು ಇತರ ಪ್ರಯತ್ನಗಳ ಮೇಲೆ ಭರವಸೆ ಇಡುವುದು ತಿಳಿಗೇಡಿತನವಾಗಿದೆ. ನೀವು ನಿಮ್ಮ ಜೀವಿತದಲ್ಲಿ ಎಂತಹ ಬದಲಾವಣೆ ಉಂಟುಮಾಡಬೇಕೆಂದರೆ ಅದು ಹೊಸ ಜೀವಿತದ ಹಾಗೆ ಭಾಸವಾಗಬೇಕು. ಇಸ್ತಿಗ್‌ಫಾರ್ ಪ್ರಾರ್ಥನೆ ಬಹಳ ಹೆಚ್ಚಾಗಿ ಮಾಡಿರಿ. ಲೌಕಿಕ ಕಾರ್ಯಗಳ ಆಧಿಕ್ಯದ ಕಾರಣದಿಂದ ಯಾರಿಗೆ ಪುರುಸೊತ್ತು ಇಲ್ಲವೋ ಅಂತಹ ಜನರು ಹೆಚ್ಚು ಭಯಪಡಬೇಕಾಗಿದೆ.

ಕೇವಲ ಫರ್ಜ್ ನಮಾಝ್‌ಗಳ ಬಗ್ಗೆ ಮಾತ್ರವಲ್ಲ ನಫ್ಲ್ ಮತ್ತು ತಹಜ್ಜುದ್ ನಮಾಝ್ ಬಗ್ಗೆ ಸಹ ಲಕ್ಷ್ಯ ನೀಡಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಬಯಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜೀವಿತವು ಪೂರ್ಣವಾಗಿ ಲೌಕಿಕ ಕೆಲಸಗಳಿಗೋಸ್ಕರ ವಿನಿಯೋಗಿಸಲ್ಪಟ್ಟರೆ, ಮತ್ತೆ ಪರಲೋಕಕ್ಕೋಸ್ಕರ ಏನು ಸಂಗ್ರಹಿಸಿದಂತಾಗುವುದು? ಆದುದರಿಂದ ತಹಜ್ಜುದ್ ನಮಾಝ್‌ಗೋಸ್ಕರ ನಿದ್ರೆಯಿಂದ ಎದ್ದೇಳಿರಿ ಮತ್ತು ಉತ್ಸಾಹಭರಿತವಾಗಿ ನಮಾಝ್ ಅನುಷ್ಠಿಸಿರಿ. ಉದ್ಯೋಗ ನಿರ್ವಹಿಸುವಾಗ ಮಧ್ಯದ ನಮಾಝ್‌ಗಳಲ್ಲಿ ಪರೀಕ್ಷೆಗಳು ಎದುರಾಗುತ್ತವೆ. **ರಾಝಿಖ್** (ಆಹಾರ ನೀಡುವವನು) ಅಲ್ಲಾಹನಾಗಿದ್ದಾನೆ. ನಮಾಝನ್ನು ಅದಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಅನುಷ್ಠಿಸಬೇಕು. ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ಕೆಲವೊಮ್ಮೆ ಒಗ್ಗೂಡಿಸಬಹುದಾಗಿದೆ. ಬಲಹೀನರಾದ ಜನರಿದ್ದಾರೆಂದು ಅಲ್ಲಾಹನಿಗೆ ತಿಳಿದಿದೆ. ಆದುದರಿಂದ ಇಂತಹ ಸವಲತ್ತು ನೀಡಲಾಗಿದೆ. ಆದರೆ ಮೂರು ನಮಾಝ್‌ಗಳನ್ನು ಒಗ್ಗೂಡಿಸಲು ಅನುಮತಿ ಇಲ್ಲ. ಉದ್ಯೋಗ ಮಾಡುವಾಗ ಕೆಲವು ವಿಷಯಗಳಿಗೆ ಸಂಬಂಧಿಸಿ ಶಿಕ್ಷೆ ಸಹ ಅನುಭವಿಸಬೇಕಾಗುತ್ತದೆ. ಕೆಲವೊಮ್ಮೆ ಉನ್ನತಧಿಕಾರಿಗಳ ಅತೃಪ್ತಿಗೆ ಪಾತ್ರರಾಗಬೇಕಾಗುತ್ತದೆ. ಹೀಗಿರುವಾಗ ಅಲ್ಲಾಹನಿಗೋಸ್ಕರ ಯಾವುದಾದರೂ ಕಷ್ಟ ಅನುಭವಿಸಬೇಕಾಗಿ ಬಂದರೆ ಅದು ಬಹಳ ಉತ್ತಮವೇ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನಮಾಝ್ ಎಂದರೇನು? ಅದು ಒಂದು ವಿಶಿಷ್ಟ ರೂಪದ ಪ್ರಾರ್ಥನೆಯಾಗಿದೆ. ಆದರೆ ಜನರು ಅದನ್ನು ಸರಕಾರ ವಿಧಿಸುವ ತೆರಿಗೆ (ಟ್ಯಾಕ್ಸ್) ಎಂದು ಭಾವಿಸುತ್ತಾರೆ. ತಾವು ನಿರ್ಬಂಧಿತರಾಗಿ ತೆರಿಗೆ ರೂಪದಲ್ಲಿ ನೀಡುವುದಾಗಿ ಅವರು ಯೋಚಿಸುತ್ತಾರೆ. ಇಂತಹ ಅಜ್ಞಾನಿಗಳಿಗೆ ತಿಳಿದಿಲ್ಲ– ಈ ಕೆಲಸಗಳ ಆವಶ್ಯಕತೆ ಅಲ್ಲಾಹನಿಗೆ ಏನಿದೆ ಎಂದು. ನಿರಾವಲಂಬಿಯಾದ ಅಲ್ಲಾಹನಿಗೆ ಇವುಗಳ ಆವಶ್ಯಕತೆ ಇಲ್ಲ. ಮನುಷ್ಯನು ಪ್ರಾರ್ಥನೆ, ಸ್ತುತಿ, ಮತ್ತು ನಾಮಸ್ಮರಣೆಯಲ್ಲಿ ತಲ್ಲೀನನಾದರೆ ಅದರಿಂದ ಅಲ್ಲಾಹನಿಗೆ ಯಾವ ಪ್ರಯೋಜನವೂ ಇಲ್ಲ. ಅವುಗಳಿಂದ ಲಾಭ ದೊರಕುವುದು ಮನುಷ್ಯನಿಗೆಯೇ ಆಗಿದೆ. ಹೀಗೆ ಮಾಡುವ ಮೂಲಕ ಮನುಷ್ಯನು ತನ್ನ ಉದ್ದೇಶಲಕ್ಷ್ಯ ಗಳಿಸುತ್ತಾನೆ. ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ, ಆರಾಧನೆ ಒಂದು ತೆರಿಗೆ ಅಥವಾ ಭಾರವಲ್ಲ. ಅದರಲ್ಲೂ ಒಂದು ರಸಾನುಭೂತಿ ಇದೆ. ಸಂತೋಷವಿದೆ. ಅದು ಲೌಕಿಕವಾದ ಎಲ್ಲ ರಸಾನುಭೂತಿಗಳಿಗಿಂತಲೂ ದೈಹಿಕ ಸುಖಗಳಿಗಿಂತಲೂ ಉನ್ನತವೂ ಶ್ರೇಷ್ಠವೂ ಆಗಿದೆ. ಆದರೆ ರೋಗಿಯಾದ ಒಬ್ಬ ಮನುಷ್ಯನಿಗೆ ಅತ್ಯುತ್ತಮ ರುಚಿಕರವಾದ ಆಹಾರವನ್ನು ರುಚಿಸಿ ಅದರಿಂದ ಆನಂದ ಪಡೆಯಲು ಅಸಾಧ್ಯವಾಗುವಂತೆ, ದುರದೃಷ್ಟಶಾಲಿಯಾದ ಮನುಷ್ಯನಿಗೆ ದೇವಾರಾಧನೆಯಿಂದ ರಸಾನುಭೂತಿ ಪಡೆಯಲು ಅಸಾಧ್ಯವಾಗುತ್ತದೆ.

ಒಬ್ಬ ರೋಗಿಯಾದ ಮನುಷ್ಯನಿಗೆ ಅವನ ರೋಗದ ಕಾರಣ ಅಥವಾ ಅವನ ನಾಲಗೆ ಕಹಿಯಾಗಿರುವ ಕಾರಣ ಅತ್ಯಂತ ಉತ್ತಮ ಆಹಾರ ಪದಾರ್ಥವನ್ನು ರುಚಿಸಲು ಸಾಧ್ಯವಾಗುವುದಿಲ್ಲ. ಇದರ ಅರ್ಥ ಆಹಾರ ಪದಾರ್ಥ ಹಾಳು ಎಂದಾಗುವುದಿಲ್ಲ. ಅವನು ರೋಗಿಯಾಗಿರುವುದೇ ಅದಕ್ಕೆ ಕಾರಣವಾಗಿದೆ. ಆದುದರಿಂದ ನಮಾಝ್ ಅನುಷ್ಠಿಸಿ ಅದರಿಂದ ರಸಾನುಭೂತಿ ಪಡೆಯಲಾಗದಿದ್ದರೆ ಅದರ ಅರ್ಥ ನಮಾಝ್‌ನಲ್ಲಿ ಅಲ್ಲಾಹನು ರಸಾನುಭೂತಿ ಇರಿಸಿಲ್ಲ ಎಂದಲ್ಲ. ಮನುಷ್ಯನು ತನ್ನ ದುರಭ್ಯಾಸ, ತನ್ನ ರೋಗ, ಕೆಟ್ಟ ಅಭಿರುಚಿ ಮೊದಲಾದುವುಗಳ ಕಾರಣದಿಂದ ನಮಾಝ್‌ನಿಂದ ರಸಾನುಭೂತಿ ಗಳಿಸದವನಾಗುತ್ತಾನೆ.

ಇದರ ಬಗ್ಗೆ ಮತ್ತೂ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜನರು ನಮಾಝ್ ಅನುಷ್ಠಿಸುವಾಗ ನಿರ್ಲಕ್ಷ್ಯರೂ ಉದಾಸೀನರೂ ಆಗಿರುವುದು ಏಕೆಂದರೆ ಅಲ್ಲಾಹನು ನಮಾಝ್‌ನಲ್ಲಿ ಇರಿಸಿರುವ ರಸಾನುಭೂತಿ ಮತ್ತು ಸಂತೋಷದ ಬಗ್ಗೆ ಅವರಿಗೆ ತಿಳಿದಿಲ್ಲ ಎಂದು ನಾನು ಕಾಣುತ್ತೇನೆ. ನಾನು ಹೇಳಲು ಬಯಸುವುದೇನೆಂದರೆ ಅಲ್ಲಾಹನೊಂದಿಗೆ ವಿನಯದಿಂದ ಈ ರೀತಿ ಪ್ರಾರ್ಥಿಸಿರಿ– ಫಲವಸ್ತುಗಳಲ್ಲೂ ಇತರ ಪದಾರ್ಥಗಳಲ್ಲೂ ವಿವಿಧ ರೀತಿಯ ರುಚಿಗಳನ್ನು ಇರಿಸಿದ ಹಾಗೆ ನಮಾಝ್ ಮತ್ತು ಆರಾಧನೆಯ ರುಚಿಯನ್ನು ಸಹ ನಮಗೆ ದೊರೆಯುವಂತೆ ಮಾಡು ಎಂದು ಅಲ್ಲಾಹನನ್ನು ಪ್ರಾರ್ಥಿಸಬೇಕು.

ತಿಂದ ವಸ್ತುವಿನ ನೆನಪು ಇರುತ್ತದೆ. ಇದೇ ರೀತಿ ನೀವು ನೋಡಿರಿ, ಒಬ್ಬನು ಒಬ್ಬ ವ್ಯಕ್ತಿಯ ಸೌಂದರ್ಯವನ್ನು ಸಂತೋಷದಿಂದ ನೋಡಿದರೆ ಅದರ ನೆನಪು ಇರುತ್ತದೆ. ಇದೇ ರೀತಿ ಒಬ್ಬ ವಿಕಾರ ಸ್ವರೂಪಿಯನ್ನು ನೋಡಿದರೆ ಅದರ ನೆನಪು ಸಹ ಇರುತ್ತದೆ. ಆದರೆ ಒಬ್ಬನೊಂದಿಗೆ ಸಂಪರ್ಕವೇ ಇಲ್ಲದಿದ್ದರೆ ನೆನಪು ಸಹ ಬಾಕಿಯಾಗಿ ಇರುವುದಿಲ್ಲ. ಇದೇ ರೀತಿ ನಮಾಝ್ ಅನುಷ್ಠಿಸದವರ ದೃಷ್ಟಿಯಲ್ಲಿ ನಮಾಝ್ ಒಂದು ದಂಡವಾಗಿ ಕಾಣುತ್ತದೆ. ಅನಾವಶ್ಯಕವಾಗಿ ಮುಂಜಾನೆ ಎದ್ದು ಚಳಿಗಾಲದಲ್ಲಿ ತಣ್ಣೀರಲ್ಲಿ ವುಝು ಮಾಡಬೇಕಾಗಿದೆ. ಸುಖನಿದ್ರೆ ಬಿಟ್ಟು ಅನೇಕ ಸುಖ ಸೌಲಭ್ಯ ಬಿಟ್ಟು ನಮಾಝ್ ಮಾಡಬೇಕಾಗಿದೆ ಎಂದು ಅವರು ಯೋಚಿಸುತ್ತಾರೆ. ವಾಸ್ತವಿಕ ವಿಷಯವೇನೆಂದರೆ ನಮಾಝ್ ಏನೆಂದು ಅವನಿಗೆ ಮನವರಿಕೆ ಆಗದ ಕಾರಣ ಅವನು ಬೇಸರಗೊಂಡಿರುತ್ತಾನೆ. ನಮಾಝ್‌ನಲ್ಲಿರುವ ರಸಾನುಭೂತಿ ಏನೆಂದು ಅವನಿಗೆ ತಿಳಿದಿರುವುದಿಲ್ಲ. ಒಬ್ಬ ಕುಡುಕ ತನಗೆ ತೃಪ್ತಿಯಾಗುವ ತನಕ ಕುಡಿಯುತ್ತಾ ಇರುತ್ತಾನೆ. ಅನಂತರ ಅವನು ಅದರಿಂದ ಮತ್ತನಾಗುತ್ತಾನೆ. ಬುದ್ಧಿಶಾಲಿಗಳು ಇದರಿಂದ ಪಾಠ ಕಲಿಯಬಹುದಾಗಿದೆ.

ಕೆಲವು ಜನರು ನಮಾಝ್ ಮಾಡುತ್ತಾ ಇದ್ದರೂ ದುಷ್ಕೃತ್ಯಗಳನ್ನು ಮಾಡುತ್ತಾರೆ. ಇದಕ್ಕೆ ಕಾರಣವೇನೆಂದರೆ ಅವರು ನಮಾಝ್ ಮಾಡುತ್ತಾರಾದರೂ ಆತ್ಮದೊಂದಿಗೆ ಮತ್ತು ನಿಷ್ಠೆಯಿಂದ ಅವರು ನಮಾಝ್ ಅನುಷ್ಠಿಸುವುದಿಲ್ಲ. ಅವರು ಆಚಾರ ಮತ್ತು ಅಭ್ಯಾಸ ಪ್ರಕಾರ ಕೇವಲ ಅಂಗ ವಿನ್ಯಾಸಗಳನ್ನು ಮಾಡುತ್ತಾರೆ. ಅವರ ಆತ್ಮ

ಮೃತವಾಗಿರುತ್ತದೆ. ಯಾವ ನಮಾಝ್‌ನಲ್ಲಿ ಸತ್ಯದ ಆತ್ಮವಿರುತ್ತದೆಯೋ ಆ ನಮಾಝ್ ಕೆಡುಕುಗಳನ್ನು ದೂರ ಸರಿಸುತ್ತದೆ. ಅದರಲ್ಲಿ ಅನುಗ್ರಹದ ಪ್ರಭಾವವಿರುತ್ತದೆ. ಅಂತಹ ನಮಾಝ್ ಖಂಡಿತವಾಗಿಯೂ ಕೆಡುಕುಗಳನ್ನು ದೂರ ಸರಿಸುತ್ತದೆ. ನಮಾಝ್ ಎಂದರೆ ಕೇವಲ ನಿಲ್ಲುವುದು, ಬಾಗುವುದು, ಕುಳಿತು ಕೊಳ್ಳುವುದು ಮತ್ತು ಎದ್ದು ಹೋಗುವುದು ಅಲ್ಲ. ನಮಾಝಿನ ತಿರುಳು ಮತ್ತು ಆತ್ಮ ಪ್ರಾರ್ಥನೆಯಾಗಿದೆ. ಅದು ತನ್ನೊಳಗೆ ಒಂದು ರಸಾನುಭೂತಿಯನ್ನೂ ಸಂತೋಷವನ್ನೂ ಹೊಂದಿರುತ್ತದೆ.

ನಮಾಝ್‌ನಲ್ಲಿ ವಿವಿಧ ಅಂಗವಿನ್ಯಾಸಗಳನ್ನು ಮಾಡುವುದರ ಉದ್ದೇಶದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಮಾಝಿನಲ್ಲಿ ಮನುಷ್ಯನು ನಿಂತುಕೊಂಡು ತಹ್‌ಮೀದ್ (ಸ್ತುತಿ) ಮತ್ತು ತಸ್‌ಬೀಹ್ (ಪರಿಶುದ್ಧಿ ವರ್ಣನೆ) ಮಾಡುವಾಗ ಅದರ ಹೆಸರು ಖಿಯಾಮ್ ಎಂದಾಗಿದೆ. ಸ್ತುತಿಸುವ ಯೋಗ್ಯವಾದ ಸ್ಥಿತಿ ನಿಂತುಕೊಳ್ಳುವುದು ಎಂದು ಎಲ್ಲರಿಗೂ ತಿಳಿದಿದೆ. ದೊರೆಯ ಮುಂದೆ ಸ್ತುತಿಗೀತೆ ಹಾಡುವಾಗ ನಿಂತುಕೊಂಡು ಹಾಡಲಾಗುತ್ತಿದೆ. ಬಾಹ್ಯವಾಗಿ ನಿಂತುಕೊಳ್ಳುವುದನ್ನು ಆಜ್ಞಾಪಿಸಲಾಗಿದೆ. ನಾಲಗೆಯಿಂದ ಸ್ತುತಿ ಮತ್ತು ಪರಿಶುದ್ಧಿ ವರ್ಣನೆ ಮಾಡಲಾಗುತ್ತದೆ. ಇದರ ಅರ್ಥವು ಆಧ್ಯಾತ್ಮಿಕವಾಗಿಯೂ ಅಲ್ಲಾಹನ ಮುಂದೆ ನಿಲ್ಲಬೇಕೆಂದಾಗಿದೆ. ಒಬ್ಬನು ಸತ್ಯವಾಗಿ ಹೊಗಳುವಾಗ ಅವನು ಒಂದು ಅಭಿಪ್ರಾಯ ಹೊಂದಿರುತ್ತಾನೆ. **ಅಲ್‌ಹಮ್ದುಲಿಲ್ಲಾಹ್** (ಸರ್ವಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು) ಎಂದು ಹೇಳುವವನು, ಹಾಗೆ ಪೂರ್ಣ ವಿಶ್ವಾಸ ಹೊಂದಿರುವಾಗ ಮಾತ್ರ ಹೇಳಲು ಸಾಧ್ಯ. ಈ ವಿಷಯ ಪೂರ್ಣವಾಗಿ ಹೃದಯದಲ್ಲಿ ಸ್ಥಾಪಿತವಾದರೆ ಇದು ಆಧ್ಯಾತ್ಮಿಕವಾಗಿ ಖಿಯಾಮ್ (ನಿಂತುಕೊಳ್ಳುವಿಕೆ) ಆಗುತ್ತದೆ. ಅನಂತರ ರುಕೂ ಮಾಡುವಾಗ **ಸುಬ್‌ಹಾನ ರಬ್ಬಿಯಲ್ ಅಝೀಮ್** ಎಂದು ಹೇಳಲಾಗುತ್ತದೆ. ಒಬ್ಬನ ಮಹತ್ವವನ್ನು ಅರಿತುಗೊಂಡಾಗ ಅವನ ಮುಂದೆ ಬಾಗುವುದು ಆವಶ್ಯಕವಾಗುತ್ತದೆ. ಆದುದರಿಂದ ರುಕೂ ಮಾಡುವಾಗ ಬಾಗಿಕೊಂಡು ಹಾಗೆ ಪ್ರಾರ್ಥಿಸಲಾಗುತ್ತಿದೆ.

ಮೂರನೆಯ ಪ್ರಾರ್ಥನೆ **ಸುಬ್‌ಹಾನ ರಬ್ಬಿಲ್ ಅಲ್‌ಲಾ** ಇದು ಅಲ್ಲಾಹನ ಮಹೋನ್ನತ ಸ್ಥಿತಿಯನ್ನು ಸೂಚಿಸುತ್ತವೆ. ಅಂತಹ ಮಹೋನ್ನತನಿಗೆ ಸಾಷ್ಟಾಂಗ ಪ್ರಣಾಮ ಮಾಡಬೇಕಾಗಿದೆ. ಅಲ್ಲಾಹನ ಪರಿಶುದ್ಧತೆ ಮತ್ತು ಅವನ ಮಹೋನ್ನತ ಸ್ಥಾನ ಮತ್ತು ಅವನು ಎಲ್ಲವುಗಳ ಮೇಲೆ ಹೊಂದಿದ ಶ್ರೇಷ್ಠತೆ ಹೃದಯದಲ್ಲಿ ಸ್ಥಾಪಿತವಾದರೆ ಸಾಷ್ಟಾಂಗ ಪ್ರಣಾಮ ಮಾಡಲಾಗುತ್ತದೆ. ಅತಿ ಮುಖ್ಯವಾದ ಇನ್ನೊಂದು ಸೇರದಿದ್ದರೆ ನಮಾಝ್ ಆಗುವುದಿಲ್ಲ. ಅದೇನು? ಅದು ಹೃದಯವಾಗಿದೆ. ಆದುದರಿಂದ ಆವಶ್ಯಕವಾದುದೇನೆಂದರೆ ನಾವು ನಿಲ್ಲುವಾಗ ಹೃದಯ ಸಹ ಖಿಯಾಮ್ ಸ್ಥಿತಿಯಲ್ಲಿರಬೇಕು. ಆಗ ಅಲ್ಲಾಹನು ನೋಡುತ್ತಾನೆ– ಹೃದಯ ವಾಸ್ತವಿಕವಾಗಿ ನಿಂತಿದೆಯೋ ದೇಹ ಮಾತ್ರವಲ್ಲ ಆತ್ಮ ಸಹ ನಿಂತಿದೆಯೋ ಎಂದು ಅಲ್ಲಾಹನು ನೋಡುತ್ತಾನೆ. ರುಕೂನಲ್ಲಿ **ಸುಬ್‌ಹಾನ ರಬ್ಬಿಲ್ ಅಝೀಮ್** ಎಂದು ಹೇಳುತ್ತಾ ಬಾಗುವ ಮನುಷ್ಯನ ಆತ್ಮ ಸಹ ಬಾಗಿದೆಯೋ ಎಂದು ಅಲ್ಲಾಹನು ನೋಡುತ್ತಾನೆ. ಇದೇ ರೀತಿ ಸಾಷ್ಟಾಂಗ ಪ್ರಣಾಮ ಮಾಡುವಾಗ ಆತ್ಮ ಸಹ ಅಲ್ಲಾಹನ ಆಸ್ಥಾನದಲ್ಲಿ ಸಾಷ್ಟಾಂಗ ಪ್ರಣಾಮ ಮಾಡುತ್ತಿದೆಯೋ ಎಂದು ಅಲ್ಲಾಹನು ನೋಡುತ್ತಾನೆ. ಒಟ್ಟಿನಲ್ಲಿ ಈ ಸ್ಥಿತಿ ಮನುಷ್ಯನಲ್ಲಿ ಉಂಟಾಗುವ ತನಕ ಮನುಷ್ಯನು ಸಮಾಧಾನ ಹೊಂದಬಾರದು. ಏಕೆಂದರೆ **ಯುಖೀಮೂನಸ್ಸಲಾತ** (ನಮಾಝನ್ನು ನೆಲೆನಿಲ್ಲಿಸುವುದು) ಎಂಬುದರ ಅರ್ಥ ಇದೇ ಆಗಿದೆ. ಈ ಸ್ಥಿತಿ ಹೊಂದುವುದು ಹೇಗೆ? ಎಂದು ಪ್ರಶ್ನಿಸುವುದಾದರೆ ಅದರ ಉತ್ತರ ಹೀಗಿದೆ: ನಮಾಝನ್ನು ಸ್ಥಿರವಾಗಿ ತಪ್ಪದೆ ಅನುಷ್ಠಿಸುತ್ತಾ ಇರಬೇಕು. ನಮಾಝ್ ಮಧ್ಯೆ ಬರುವ ಸಂಶಯ ಮತ್ತು ಯೋಚನೆಗಳ ಬಗ್ಗೆ ಗಾಬರಿಪಡಬಾರದು. ಆರಂಭದಲ್ಲಿ ಸಂಶಯಗಳ ಒಂದು ಸಂಘರ್ಷ ನಡೆಯುತ್ತದೆ. ಇದಕ್ಕೆ ಪರಿಹಾರವೇನೆಂದರೆ ಆಯಾಸಗೊಳ್ಳದೆ ಸ್ಥಿರತೆಯಿಂದಲೂ ಸಹನೆಯಿಂದಲೂ ನಮಾಝ್ ಮಾಡಬೇಕು. ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಾ ಇರಬೇಕು. ಕೊನೆಗೆ ನಾನು ವಿವರಿಸಿದ ಸ್ಥಿತಿಗೆ ಮನುಷ್ಯನು ತಲುಪುವನು.

ಒಟ್ಟಿನಲ್ಲಿ, ಮನುಷ್ಯನಲ್ಲಿ ಸ್ಥಿರ ಮನೋಭಾವ ಉಂಟಾದರೆ ಅಲ್ಲಾಹನು ತನ್ನ ದಾಸನ ಕಡೆಗೆ ಓಡಿಕೊಂಡು ಆಗಮಿಸುತ್ತಾನೆ. ಅನಂತರ ಅಲ್ಲಾಹನ ಅನುಗ್ರಹ ಸಹ ಇಳಿದು ಬರುತ್ತದೆ. ಆದರೆ ಈ ವಾಸ್ತವಿಕತೆಯನ್ನು ಅನೇಕರು ಮನವರಿಕೆ ಮಾಡಿಕೊಳ್ಳುವುದಿಲ್ಲ. ಅವರು ಅವಸರಪಟ್ಟುಕೊಂಡು ಅಲ್ಲಾಹನನ್ನು ಬಿಟ್ಟುಬಿಡುತ್ತಾರೆ. ಅಥವಾ ಅವನ ಮಹತ್ವವನ್ನು ಅರಿತುಕೊಳ್ಳುವುದಿಲ್ಲ. ಅಥವಾ ಬಹಳ ಕಡಿಮೆ ಅರ್ಥ ಮಾಡಿಕೊಳ್ಳುತ್ತಾರೆ. ಅನಂತರ ಲೌಕಿಕ ಏರ್ಪಾಟುಗಳ ಕಡೆಗೆ ಓಡುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಬೇಕಾದುದೇನೆಂದರೆ ನಮಾಝ್ ಅದರ ಮೂಲ ಅರ್ಥದಲ್ಲಿ ಪ್ರಾರ್ಥನೆ ಮೂಲಕವೇ ಲಭಿಸುತ್ತವೆ. ಅಲ್ಲಾಹನ ಹೊರತು ಅನ್ಯರನ್ನು ಬೇಡಿಕೊಳ್ಳುವುದು ಸತ್ಯವಿಶ್ವಾಸಿಗೆ ಅಭಿಮಾನರ್ಹವಲ್ಲ. ಏಕೆಂದರೆ ಬೇಡಿಕೆ ಸಮರ್ಪಣೆಗೆ ಅರ್ಹ ಅಲ್ಲಾಹನು ಮಾತ್ರ. ಸಾಧಾರಣವಾಗಿ ಒಬ್ಬರಿನ್ನೊಬ್ಬರೊಂದಿಗೆ ಸಂಬಂಧ ಸ್ಥಾಪಿಸಿರುತ್ತಾರೆ, ಪರಸ್ಪರ ಬೇಡಿಕೆಗಳೂ ಇರುತ್ತವೆ. ಆದರೆ ಅಲ್ಲಾಹನೊಂದಿಗೆ ಮಾತ್ರ ಸಂಬಂಧಿಸಿದ ಬೇಡಿಕೆಗಳಿಗಾಗಿ ಅಲ್ಲಾಹನನ್ನು ಬಿಟ್ಟು ಬೇರೆಯವರೊಂದಿಗೆ ಭರವಸೆ ಇಟ್ಟುಕೊಳ್ಳುವುದು ತಪ್ಪಾಗಿದೆ. ಮನುಷ್ಯನು ಪೂರ್ಣವಾಗಿ ತನ್ನನ್ನು ನಿಸ್ಸಾರನೆಂದು ಪರಿಗಣಿಸುತ್ತಾ ಅಲ್ಲಾಹನೊಂದಿಗೆ ಮಾತ್ರ ಬೇಡಿಕೊಳ್ಳಬೇಕು. ಹಾಗೆ ಆಗದಿದ್ದರೆ ಒಬ್ಬನು ಸತ್ಯ ಮುಸ್ಲಿಮನೆಂದು ಕರೆಯಲ್ಪಡಲು ಅರ್ಹನಾಗಲಾರನು. ಇಸ್ಲಾಮ್ ಎಂಬುದರ ಅರ್ಥವು ಮನುಷ್ಯನ ಎಲ್ಲ ಶಕ್ತಿ ಸಾಮರ್ಥ್ಯಗಳು ಅವು ಆಂತರಿಕವಾಗಿದ್ದರೂ ಬಾಹ್ಯವಾಗಿದ್ದರೂ ಎಲ್ಲವೂ ಅಲ್ಲಾಹನ ಆಸ್ಥಾನದಲ್ಲಿ ಬಿದ್ದಿರುತ್ತವೆ ಎಂಬುದಾಗಿದೆ. ಅಲ್ಲಾಹನ ಹೊರತು ಅನ್ಯರನ್ನು ಬೇಡಿಕೊಳ್ಳುವವನು ದುರದೃಷ್ಟಶಾಲಿ ಮತ್ತು ಅನುಗ್ರಹ ರಹಿತನಾಗಿದ್ದಾನೆ. ಒಟ್ಟಿನಲ್ಲಿ, ಮನುಷ್ಯನು ಅಲ್ಲಾಹನನ್ನು ಬಿಟ್ಟು ಅನ್ಯರನ್ನು ಬೇಡಿಕೊಳ್ಳುವುದು ಬಹಳ ಅಪಾಯಕರವಾದ ಮತ್ತು ಹೃದಯದಲ್ಲಿ ಕಂಪನ ಉಂಟು ಮಾಡುವ ವಿಷಯವಾಗಿವೆ. ಆದುದರಿಂದ ನಮಾಝ್ ಬಗ್ಗೆ ಸ್ಥಿರಚಿತ್ತತೆ ಬಹಳ ಆವಶ್ಯಕವಾಗಿದೆ. ಅದು ಸ್ಥಿರವಾದ ಅಭ್ಯಾಸವಾಗಬೇಕು. ಅಲ್ಲಾಹನ ಕಡೆಗೆ ಮರಳುವ ಬಗ್ಗೆ ಯೋಚನೆ ಇರಬೇಕು. ಅನಂತರ ಅವನು ಕ್ರಮೇಣ ಎಲ್ಲವನ್ನೂ ಬಿಟ್ಟು ಅಲ್ಲಾಹನಿಗೆ ಸೇರಿದವನಾಗಿ ಒಂದು ರಸಾನುಭೂತಿಯ ವಾರೀಸುದಾರನಾಗುತ್ತಾನೆ. ನಾನು ಪುನಃ ಒತ್ತಿ ಹೇಳುತ್ತೇನೆ– ಅಲ್ಲಾಹನ ಹೊರತು ಅನ್ಯರ ಕಡೆಗೆ ತಿರುಗುವುದರ ಕೆಡುಕುಗಳನ್ನು ವಿವರಿಸುವ ಶಬ್ದಗಳು ನನಗೆ ಲಭಿಸುವುದಿಲ್ಲ. ಜನರ ಬಳಿಗೆ ಹೋಗಿ ಅವರನ್ನು ಮೆಚ್ಚಿಸುವ ಮಾತನ್ನಾಡುವುದು ಇದು ಅಲ್ಲಾಹನ ಅಭಿಮಾನವನ್ನು ಉತ್ತೇಜಿಸುತ್ತದೆ. ನಾನು ಇದನ್ನು ಸ್ಥೂಲವಾಗಿ ಹೀಗೆ ಉದಾಹರಿಸುತ್ತೇನೆ: ಒಬ್ಬ ಅಭಿಮಾನಿ ಪತಿ ತನ್ನ

ಪತ್ನಿ ಅನ್ಯನೊಂದಿಗೆ ಸಂಬಂಧ ಸ್ಥಾಪಿಸುವುದನ್ನು ನೋಡಲು ಇಷ್ಟಪಡಲಾರ. ಅಂತಹ ಸ್ಥಿತಿಯಲ್ಲಿ ಆ ಹೆಂಗಸು ವಧಾರ್ಹಳೆಂದು ಅವನು ಭಾವಿಸುತ್ತಾನೆ. ಅದೇ ರೀತಿ ಪ್ರಾರ್ಥನೆ ಅಲ್ಲಾಹನಿಗೆ ಮಾತ್ರ ಅರ್ಹವಾಗಿದೆ. ಬೇರೆ ಯಾರನ್ನಾದರೂ ಮನುಷ್ಯನು ಆರಾಧ್ಯನೆಂದು ಗಣಿಸುವುದು ಅಲ್ಲಾಹನು ಇಷ್ಟಪಡಲಾರನು.

ಆದುದರಿಂದ ನೆನಪಿಡಿರಿ, ಚೆನ್ನಾಗಿ ನೆನಪಿಡಿರಿ, ಅಲ್ಲಾಹನ ಹೊರತು ಅನ್ಯರ ಕಡೆಗೆ ಬಾಗುವುದು ಅಲ್ಲಾಹನೊಂದಿಗೆ ಸಂಬಂಧ ವಿಚ್ಛೇಧಿಸಿದುದಕ್ಕೆ ಸಮವಾಗಿದೆ. ಕೆಲವರು ಭಾವಿಸುತ್ತಾರೆ– ಅಲ್ಲಾಹನ ಮುಂದೆ ಗೋಳಿಟ್ಟು ಪ್ರಾರ್ಥಿಸುವುದರಿಂದ ಪ್ರಯೋಜನವಿಲ್ಲವೆಂದು. ಇದು ಸಂಪೂರ್ಣ ತಪ್ಪು ಅಭಿಪ್ರಾಯವಾಗಿದೆ. ಅಂತಹ ಜನರಿಗೆ ಅಲ್ಲಾಹನ ಶಕ್ತಿಸಾಮರ್ಥ್ಯಗಳ ಬಗ್ಗೆ ನಂಬಿಕೆ ಇಲ್ಲ. ಅವರಲ್ಲಿ ವಾಸ್ತವಿಕ ವಿಶ್ವಾಸ ಇರುತ್ತಿದ್ದರೆ ಅವರು ಹಾಗೆ ಹೇಳಲು ಧೈರ್ಯ ಹೊಂದುತ್ತಿರಲಿಲ್ಲ. ಯಾರಾದರೂ ಅಲ್ಲಾಹನ ಸನ್ನಿಧಿಗೆ ಬಂದು ಸತ್ಯವಾಗಿ ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸಿದರೆ ಅಲ್ಲಾಹನು ಅಂತಹ ವ್ಯಕ್ತಿಗೆ ಯಾವಾಗಲೂ ತನ್ನ ಅನುಗ್ರಹ ನೀಡುತ್ತಾನೆ.

ಅಲ್ಲಾಹನು ಇಚ್ಛಿಸುವುದೇನೆಂದರೆ ನೀವು ಪರಿಶುದ್ಧ ಹೃದಯದೊಂದಿಗೆ ಅಲ್ಲಾಹನ ಸಮೀಪಕ್ಕೆ ಬರಬೇಕು. ಶರತ್ತೇನೆಂದರೆ ಅದಕ್ಕೆ ಅನುಸಾರವಾಗಿ ನಿಮ್ಮನ್ನು ಪರಿವರ್ತಿಸಬೇಕು. ಇದು ಬಹಳ ದೊಡ್ಡ ವಿಷಯವಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ– ಅಲ್ಲಾಹನಿಗೆ ಅದ್ಭುತ ಶಕ್ತಿಗಳಿವೆ. ಅವನು ಅಪರಿಮಿತ ಅನುಗ್ರಹದಾಯಕನೂ ಆಗಿದ್ದಾನೆ. ಆದರೆ ಅವುಗಳನ್ನು ಕಾಣಲು ಮತ್ತು ಪಡೆಯಲು ಪ್ರೀತಿಯ ಕಣ್ಣು ಹೊಂದಿರಬೇಕು. ಸತ್ಯವಾದ ಪ್ರೀತಿ ಇದ್ದರೆ ಅಲ್ಲಾಹನು ಪ್ರಾರ್ಥನೆಗಳನ್ನು ಬಹಳವಾಗಿ ಆಲಿಸುತ್ತಾನೆ ಮತ್ತು ಸಹಾಯ ನೀಡುತ್ತಾನೆ. ಆದುದರಿಂದ ನಾವು ನಮ್ಮ ಸ್ಥಿತಿಯನ್ನು ಹೇಗೆ ಪರಿವರ್ತಿಸಬೇಕೆಂದರೆ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸುವವನಾಗಬೇಕು. ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುವುದಿಲ್ಲ ಎಂದು ಆಕ್ಷೇಪಿಸುವವರಲ್ಲಿ ಹೆಚ್ಚಿನವರು ಐದು ಹೊತ್ತಿನ ನಮಾಝನ್ನು ಸಹ ಅನುಷ್ಠಿಸುವುದಿಲ್ಲ. ಅವರಿಗೆ ಯಾವುದಾದರೂ ಲೌಕಿಕ ಕಷ್ಟ ಉಂಟಾದರೆ ಮಾತ್ರ ಅವರು ನಮಾಝ್ ಬಗ್ಗೆ ಯೋಚಿಸುತ್ತಾರೆ. ಅಲ್ಲಾಹನು ಹೇಳುವುದೇನೆಂದರೆ ನಾನು ನಿಮ್ಮ ಪ್ರಾರ್ಥನೆಗಳನ್ನು ನಿಶ್ಚಯವಾಗಿಯೂ ಆಲಿಸುವೆನು, ಆದರೆ ನೀವು ನನ್ನ ಆಜ್ಞೆಗಳನ್ನು ಪಾಲಿಸಬೇಕು ಎಂದು. ಆದುದರಿಂದ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ತಾನು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತೇನೋ ಎಂದು ನೋಡಬೇಕು. ಯಾರಿಗಾದರೂ ಅಲ್ಲಾಹನ ಬಗ್ಗೆ ದೂರು ಇದ್ದರೆ ಅವನು ಮೊದಲು ನೋಡಿಕೊಳ್ಳಲಿ, ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಎಷ್ಟು ಆಜ್ಞೆಗಳನ್ನು ಅವನು ಪಾಲಿಸುತ್ತಾನೆಂದು. ಅಂತಿದ್ದೂ ಅಲ್ಲಾಹನು ಜನರ ಮೇಲೆ ದಯೆದೋರಿ ಅವರ ಅನೇಕ ತಪ್ಪುಗಳನ್ನು ಕಡೆಗಣಿಸುತ್ತಾನೆ. ಅವರ ಕೆಲವು ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಅನೇಕ ಜನರು ಕ್ರಮ ಬದ್ಧವಾಗಿ ನಮಾಝ್ ಅನುಷ್ಠಿಸುವವರಾಗದಿದ್ದರೂ ಅವರ ಕೆಲವು ಪ್ರಾರ್ಥನೆಗಳು ಅಂಗೀಕಾರ ಪಡೆಯುತ್ತವೆ. ಇದು ಅಲ್ಲಾಹನ ಔದಾರ್ಯವಾಗಿದೆ. ಅಲ್ಲಾಹನು ತನ್ನ ಬೇರೆ ಗುಣವಿಶೇಷಗಳ ಮೂಲಕ ಅವರ ಆವಶ್ಯಕತೆಗಳನ್ನು ಈಡೇರಿಸುತ್ತಾನೆ. ಆದುದರಿಂದ ಅಲ್ಲಾಹನನ್ನು ದೂರಲು ಆಸ್ಪದವೇ ಇಲ್ಲ. ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸಬೇಕು. ಅವನ ಆಜ್ಞೆಗಳ ಪ್ರಕಾರ ನಮ್ಮ ಆರಾಧನೆಗಳನ್ನೂ ನಮಾಝ್‌ಗಳನ್ನೂ ಮತ್ತು ಬೇರೆ ಕಡ್ಡಾಯ ಕರ್ತವ್ಯಗಳನ್ನೂ ಈಡೇರಿಸಲು ಪ್ರಯತ್ನ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಪರಿಪೂರ್ಣವಾಗಿ **ತೌಹೀದ್** (ಏಕದೇವ ವಿಶ್ವಾಸದಲ್ಲಿ) ಕಾರ್ಯನಿರತನಾಗುವವರೆಗೂ ಅವನಲ್ಲಿ ಇಸ್ಲಾಮ್ ಬಗ್ಗೆ ಪ್ರೀತಿ ಮತ್ತು ಗೌರವ ಸ್ಥಾಪಿತವಾಗಲಾರದು.

ಅಲ್ಲಾಹನು ನಮಗೆ ಭಾಗ್ಯ ನೀಡಲಿ ನಾವು ನಮ್ಮ ನಮಾಝ್‌ಗಳನ್ನು ಸಂರಕ್ಷಿಸುವವರಾಗಲಿ. ನಮ್ಮ ಆತ್ಮ ಮತ್ತು ನಮ್ಮ ಮನೋಭಾವ ನಮಾಝನ್ನು ಅರ್ಹವಾದ ರೀತಿಯಲ್ಲಿ ಅನುಷ್ಠಿಸುವವುಗಳಾಗಲಿ–ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 15-04-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon